ದಿನಾಂಕಃ **25.11.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ಮಾನ್ಯ ಶ್ರೀಮತಿ. **VS** ರವರಿಂದಃ

ಆರೋಪಿ ನಮ್ಮ ಊರಿನ ಹೆಣ್ಣು ಮಗಳನ್ನು ಮದುವೆಯಾಗಿದ್ದು, ಅವರ ಮನೆ ನಮ್ಮ ಮನೆಯ ಹತ್ತಿರ ಇರುವ ಕಾರಣ ಪರಿಚಯವಿದೆ. ಆರೋಪಿಯ ಮನೆ ಹಾಗೂ ನಮ್ಮ ಮನೆ ನಡುವೆ ಸುಮಾರು **8-9** ಮನೆಗಳು ಇರುತ್ತವೆ.

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ನಾನೇ ಬರೆಸಿರುತ್ತೇನೆ. ನನಗೆ ಅದರಲ್ಲಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು **6** ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ.

ಊರಿನಲ್ಲಿ ಯಾರಿಗಾದರೂ ಕಷ್ಟ ಬಂದರೆ ಹಣಕಾಸಿನ ಸಹಾಯ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಎನು ವ್ಯವಹಾರ ನಡೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಹಣ ಕೊಡುವ **15** ದಿನಗಳ ಮುಂಚೆ ಆರೋಪಿ ನಮ್ಮ ಮನೆಯ ಬಳಿ ಸಾಲ ಕೇಳಿದ್ದರು, ದಿನಾಂಕ ನೆನಪಿಲ್ಲ. ಆರೋಪಿ ಹಣ ಕೇಳಲು ಬಂದಾಗ ಬೇರೆ ಯಾರು ಇರಲಿಲ್ಲ, ಆರೋಪಿ ಸಹ ಒಬ್ಬರೇ ಬಂದಿದ್ದರು. ಆಗ ಬೆಳಿಗ್ಗೆ **11-11.50** ರ ಸಮಯವಾಗಿತ್ತು. ನನ್ನ ತಂದೆ ಮನೆಯಿಂದ ನಾನು ಜಮೀನು ಕೇಳಿದಾಗ ಜಮೀನಿನ ಬದಲಾಗಿ ಹಣ ಕೊಟ್ಟಿರುತ್ತಾರೆ, ಈ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ದಾಖಲೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ.

ಆರೋಪಿ ಕೈ ಸಾಲ ತೀರಿಸಲು ಮತ್ತು ಮನೆಯ ಖರ್ಚಿಗೆ ಹಣ ಕೇಳಿರುತ್ತಾರೆ. ಆರೋಪಿ ನನ್ನಿಂದ ಕೈ ಸಾಲ ತೀರಿಸಲು ಮತ್ತು ಮನೆಯ ಖರ್ಚಿಗೆ ಹಣ ಪಡೆದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ಹಾಗೂ

This is a True Copy of the Court Records Online. Authenticated @ districts.ecourtsindia.com/cnr/KAMD310029262022/truecopy/order-2.pdf
www.ecourtsindia.com

ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು **2** ಲಕ್ಷ ರೂ. ಗಳ ಸಾಲವನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ **2** ತಿಂಗಳ ನಂತರ **2** ಲಕ್ಷ ರೂ.ಗಳನ್ನು ವಾಪಸ್ಸು ಕೊಡುವುದಾಗಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಸಾಲ ಪಡೆದು ಚೆಕ್ ನೀಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಿ.**02.07.2022** ರಂದು ಆರೋಪಿ ಕೆನರಾ ಬ್ಯಾಂಕಿನ ಚೆಕ್ ನೀಡಿರುತ್ತಾರೆ. ನಾನು ಆರೋಪಿಯಿಂದ ಖಾಲಿ ಚೆಕ್ ಪಡೆದುಕೊಂಡಿಲ್ಲ. ಆರೋಪಿಯಿಂದ ಅಕ್ರಮ ಹಣ ಗಳಿಸುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ

This is a True Copy of the Court Records Online. Authenticated @ districts.ecourtsindia.com/cnr/KAMD310029262022/truecopy/order-2.pdf